[Govt. of Karnataka C.R.P. 67]

| Deposition Sheets (RP.No.57) Form No.4 (Civil) | **IN THE COURT OF CIVIL JUDGE & J.M.F.C., KARKALA.** |
|---|---|

**Criminal Case No. 1707/2022**

**..................................................Vs...................................**

ಪಿ.ಡಬ್ಲ್ಯು : 3 ಸಿ.ಡಬ್ಲ್ಯು : 3

| | | |
|---|---|---|
| ಸಾಕ್ಷಿದಾರನ ಹೆಸರು | : | ಸಂತೋಷ್ |
| ತಂದೆಯ ಹೆಸರು | : | ಬೊಮ್ಮಯ್ಯ ಶೆರಿಗಾರ್ |
| ಪ್ರಾಯ | : | 36 ವರ್ಷ |
| ಉದ್ಯೋಗ | : | ಪೊಲೀಸ್ ಪೇದೆ (ಚಾಲಕ) |
| ವಾಸ | : | ಗಿಳ್ಯಾಳಿ ಹೆಬ್ರಿ |

ದಿನಾಂಕ 24.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು 3 ವರ್ಷದಿಂದ ಹೆಬ್ರಿ ಪೋಲಿಸ್ ಠಾಣೆಯಲ್ಲಿ ಪೊಲೀಸ್ ಉಪನೀರಿಕ್ಷಕರ ವಾಹನದ ಚಾಲಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿಗಳು ಗೈರು ಹಾಜರಾಗಿದ್ದು ಆರೋಪಿಗಳನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

ದಿಃ12.04.2022 ರಂದು ಚಾಸಾ-1 ರವರು ಅಕ್ರಮ ಗೋ ಸಾಗಟದ ಬಗ್ಗೆ ವಿಶೇಷ ಗಸ್ತಿನ ಬಗ್ಗೆ ಕರೆದಿದ್ದು ನಾನು ಅವರೊಂದಿಗೆ ಸೋಮೇಶ್ವರ ಸರ್ಕಲ್ ಹತ್ತಿರ ಹೋಗಿರುತ್ತೇನೆ. ನಮ್ಮ ಜೊತೆಯಲ್ಲಿ ಚಾಸಾ-2 ರವರು ಇದ್ದರು. ನಾವು ಸೋಮೇಶ್ವರ ಸರ್ಕಲ್ ನಲ್ಲಿ ವಾಹನ ತಪಾಸಣೆ ಮಾಡುತ್ತಿದ್ದಾಗ ಮುಂಜಾನೆ 2.00 ಗಂಟೆಗೆ ಒಂದು ವಾಹನವು ಅತೀವೇಗದಿಂದ ಬರುತ್ತಿದ್ದು ಅದನ್ನು ಕಂಡು ಚಾಸಾ-1 ರವರು ನಿಲ್ಲಿಸಲು

ಸೂಚಿಸಿದಾಗ ವಾಹನವನ್ನು ನಿಲ್ಲಿಸದೆ ಅತೀವೇಗದಿಂದ ಉಡುಪಿ ಕಡೆಗೆ ಹೋಗಿರುತ್ತಾರೆ. ನಾವು ನಮ್ಮ ಜೀಪಿನಲ್ಲಿ ಸದರಿ ವಾಹನವನ್ನು ಹಿಂಬಾಳಿಸಿಕೊಂಡು ಹೋಗಿ ಕೈಕಂಬ ಮುಧ್ರಾಡಿ ಮಾರ್ಗವಾಗಿ ಮುಧ್ರಾಡಿ ಬ್ಯಾಣದಲ್ಲಿ ಉಡುಪಿ ಕಡೆಗೆ ತಿರುಗಿಸುವಾಗ ಸದ್ರಿ ವಾಹನವು ಮಣಿಕಂಠ ಎಂಬುವವರ ಟೈಲರ್ ಅಂಗಡಿಗೆ ಅಪಘಾತಪಡಿಸಿ ವಾಹನದಲ್ಲಿದ್ದ ವ್ಯಕ್ತಿಗಳು ಓಡಿಹೋಗಿರುತ್ತಾರೆ. ಆ ಸಂದರ್ಭ ಚಾಸಾ-1 ಮತ್ತು 2 ರವರು ವಾಹನದಿಂದ ಇಳಿದು ಸದ್ರಿ ವ್ಯಕ್ತಿಗಳನ್ನು ಹಿಡಿಯಲು ಪ್ರಯತ್ನಿಸಿದಾಗ ಅವರು ಕಾಡಿನಲ್ಲಿ ಹೋಗಿ ತಪ್ಪಿಸಿಕೊಂಡಿರುತ್ತಾರೆ.

ಸದ್ರಿ ವಾಹನದ ಹಿಂಬದಿಯಲ್ಲಿ ಟರ್ಪಾಲು ಇದ್ದು ಅನುಮಾನ ಬಂದು ಟರ್ಪಾಲ್ ತೆಗೆದು ನೋಡಿದಾಗ ಸದ್ರಿ ವಾಹನದಲ್ಲಿ ದನ ಮತ್ತು ಕರುಗಳು ಇರುವುದು ಕಂಡು ಬಂದಿರುತ್ತದೆ. ಸದ್ರಿ ಜಾನುವಾರುಗಳ ಕಾಲುಗಳನ್ನು ಕಟ್ಟಿಹಾಕಿರುವುದು ಕಂಡುಬಂದಿರುತ್ತದೆ. ಸದ್ರಿ ವಾಹನವನ್ನು ನೋಡಿದಾಗ ಸದ್ರಿ ವಾಹನವು ಟಾಟಾ ಯೋದ ಜನನ್ ಪಿಕಪ್ ವಾಹನವಾಗಿರುತ್ತದೆ. ಸದ್ರಿ ವಾಹನಕ್ಕೆ ಹಿಂದೆ ಹಾಗೂ ಮುಂದೆ ನಂಬರ್ ಪ್ಲೇಟ್ ಇರುವುದಿಲ್ಲ ಹಾಗೂ ವಾಹನದ ಮುಂದಿನ ಗಾಜು ಒಡೆದುಹೋಗಿರುತ್ತದೆ. ಚಾಸಾ-1 ರವರು ಸದ್ರಿ ವಾಹನ ಹಾಗೂ ಜಾನುವಾರುಗಳನ್ನು ನೋಡಿ ಸದ್ರಿ ಜಾನುವಾರುಗಳನ್ನು ಖಾಸಾಯಿಖಾನೆಗೆ ಕೊಂಡು ಹೋಗಲು ಸಾಗಿಸುತ್ತಿದ್ದಾರೆ ಎಂದು ಅನುಮಾನಗೊಂಡು ಸದ್ರಿ ಸ್ಥಳದಲ್ಲಿಯೇ ಮುಂಜಾನೆ 3.30 ಗಂಟೆ ಸಮಯಕ್ಕೆ ವರದಿ ತಯಾರಿಸಿ ಚಾಸಾ-2 ರವರ ಮುಖಾಂತರ ಠಾಣೆಗೆ ಕಳುಹಿಸಿರುತ್ತಾರೆ.

ನಂತರ ಚಾಸಾ-2 ರವರು 4.30 ಗಂಟೆಗೆ ಠಾಣೆಯಿಂದ ಹಿಂತಿರುಗಿ ಬಂದು ಪ್ರಕರಣದ ಕಡತವನ್ನು ಚಾಸಾ-1 ರವರಿಗೆ ನೀಡಿರುತ್ತಾರೆ. ನಂತರ ಚಾಸಾ-4 ಮತ್ತು 5 ರವರನ್ನು ಪಂಚರಾಗಿ ಸಹಕರಿಸುವಂತೆ ಚಾಸಾ-1 ರವರು ಕರೆಸಿರುತ್ತಾರೆ. ನಂತರ ನನ್ನ ಚಾಸಾ-2 4 ಮತ್ತು 5 ರವರ ಸಮಕ್ಷಮ ಚಾಸಾ-1 ರವರು ಮಹಜರು ಮಾಡಿ ವಾಹನ, 20 ಹುರಿಹಗ್ಗ, ಕಪ್ಪು ಬಣ್ಣದ ನೋಕಿಯಾ ಮೊಬೈಲ್, 20-26 ಇಂಚು ಇರುವ ಮರದ ಮುಂಡು ಕತ್ತಿ, 26 ಇಂಚು ಉದ್ದ ಇರುವ ಕಬ್ಬಿಣದ ತಲಾವರ್ ನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಸದ್ರಿ ಮಹಜರನ್ನು ಮುಂಜಾನೆ 4.45 ರಿಂದ 6.45 ರವರೆಗೆ ವಾಹನದ ಬೆಳಕಿನಿಂದ ಮತ್ತು ಚಾಸಾ-2ರ ವರ ಕೈಯಲ್ಲಿದ್ದ ಟಾರ್ಚ್ ಸಹಾಯದಿಂದ ತಯಾರಿಸಿರುತ್ತಾರೆ.

ದಿಃ16.05.2022 ರಂದು ಠಾಣೆಯಲ್ಲಿರುವಾಗ 1 ರಿಂದ 3 ನೇ ಆರೋಪಿತರು ಠಾಣೆಗೆ ಹಾಜರಾಗಿದ್ದು ಚಾಸಾ-20 ರವರು ಆರೋಪಿತರನ್ನು ತೋರಿಸಿ ಇವರೇ ಘಟನೆಯ ದಿನ ಓಡಿ ಹೋದ ವ್ಯಕ್ತಿಗಳು ತೋರಿಸಿರುತ್ತಾರೆ. ನಂತರ ಅವರನ್ನು ಚಾಸಾ-20 ರವರು ವಿಚಾರಿಸಿದಾಗ ಆರೋಪಿಗಳು ನಾವೆ ಸೋಮೇಶ್ವರದ ನಾಡ್ವಾಲ್ ಗ್ರಾಮದ ದುಳ್ಳಿ ಎಂಬಲ್ಲಿ ರಸ್ತೆಯ ಬದಿಯಲ್ಲಿ ಮಲಗಿದ್ದ 6 ಜಾನುವಾರುಗಳು, ಅಂಗಡಿಬೆಟ್ಟು ಎಂಬಲ್ಲಿ ಮಲಗಿದ್ದ 4 ಜಾನುವಾರುಗಳನ್ನು ಹಾಗೂ ಬೇಳಂಜೆಯ ತೆಂಕುಹೋಲ ಎಂಬಲ್ಲಿ ಮಲಗಿದ್ದ 4 ಜಾನುವಾರುಗಳನ್ನು ಕಳುವು ಮಾಡಿ ಮಂಗಳೂರಿನ ಖಾಸಾಯಿಖಾನೆ ತೆಗೆದುಕೊಂಡು ಹೋಗುವುದಾಗಿ ಹಾಗೂ ಘಟನೆಯ ದಿನ ನಾವೆ ಪರಾರಿಯಾಗಿರುವ ವ್ಯಕ್ತಿಗಳು ಎಂದು ತಿಳಿಸಿದ್ದು ಹಾಗೂ ಘಟನೆಯ ದಿನ ನಮ್ಮೊಂದಿಗೆ ರಶೀದ್ ಮತ್ತು ಹಸನಬ್ಬ ಎಂಬುವವರು ನಮ್ಮ ಜೊತೆ ಇದ್ದರು. ಈಗ ತಲೆ ಮರೆಸಿಕೊಂಡಿರುತ್ತಾರೆ ಎಂದು ತಿಳಿಸಿದ್ದು ಸದ್ರಿ ದಿನ 2 ನೇ ಆರೋಪಿ ರಹೀಮ್ ವಾಹನವನ್ನು ಚಾಲಯಿಸುತ್ತಿದ್ದರು ಎಂದು ತಿಳಿಸಿರುತ್ತಾರೆ. ಸಾಕ್ಷಿಯು ಸ್ವಾಧೀನಪಡಿಸಿಕೊಂಡ ಜಾನುವಾರುಗಳ ಹಾಗೂ ವಾಹನಗಳ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-3 ರಿಂದ 17 ಎಂದು ಗುರುತಿಸಲಾದಗಿದೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಕಪ್ಪು ಬಣ್ಣದ ಮೊಬೈಲ್ ನೋಡಿ ಗುರುತಿಸಿದ್ದು ಅದನ್ನು ಮು ಮಾ-4 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮಂಡೆ ಕತ್ತಿ, ತಲವಾರ್ ಹಾಗೂ ಹುರಿಹಗ್ಗಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು ಮಾ-1 ರಿಂದ 3 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಹೆಚ್ ಆರ್ ಕೆ ವಕೀಲರಿಂದಃ

ವಿಶೇಷ ಗಸ್ತು ಕರ್ತವ್ಯಕ್ಕೆ ಚಲಾನಾಗಿ ಹೋದಾಗ ಚಾಲಕನು ವಾಹನದಲ್ಲಿಯೇ ಇರುತ್ತಾರೆ. ಆ ದಿನ ನಾನು ವಾಹನದ ಒಳಗೆ ಇದ್ದೇನು. ನಾವು ವಾಹನವನ್ನು ಪಶ್ಚಿಮಕ್ಕೆ ಮುಖ ಮಾಡಿ ನಿಲ್ಲಿಸಿದ್ದೇವು. ನಾನು ಜೀಪಿನಲ್ಲಿ ಇದ್ದ ಕಾರಣ ಅತೀವೇಗವಾಗಿ ಬರುತ್ತಿದ್ದ ವಾಹನದ ಒಳಗೆ ಯಾರು ಇದ್ದರು ಎಂದು ನೋಡಿರುವುದಿಲ್ಲ. ಸದ್ರಿ ವಾಹನವು ಸುಮಾರು 80 ಕಿ ಮೀ ವೇಗವಾಗಿ ಬರುತ್ತಿತ್ತು. ಸೋಮೇಶ್ವರ ಸರ್ಕಲ್ ತಿರುವು ಇದ್ದ ಪ್ರದೇಶ ಎಂದರೆ ಸರಿ. ಸದ್ರಿ ವಾಹನವನ್ನು ನಾವು ಸುಮಾರು 16 ಕಿ ಮೀ ಬೆನ್ನಟ್ಟಿರುತ್ತೇವೆ. ನಾನು

ಆರೋಪಿಗಳನ್ನು ಬೆನ್ನಟ್ಟಿರುವುದಿಲ್ಲ. ವಾಹನದಲ್ಲಿ 4 ಜನ ಇಳಿದು ಓಡಿರುವುದನ್ನು ನೋಡಿರುತ್ತೇನೆ, ಆದರೆ ಅವರ ಚಹರೆಯನ್ನು ನೋಡಿರುವುದಿಲ್ಲ. ಸುಮಾರು 20- 30 ಮೀಟರ್ ಅಂತರದಲ್ಲಿ ನೋಡಿರುತ್ತೇನೆ. ಚಾಸಾ-1 ಮತ್ತು 2 ರವರು ಸದರಿ ವ್ಯಕ್ತಿಗಳನ್ನು 30 ಮೀಟರ್ ಬೆನ್ನಟ್ಟಿರಬಹುದು. ನನ್ನ ಹೇಳಿಕೆಯಲ್ಲಿ ಹಾಗೂ ಮಹಜರಿನಲ್ಲಿ ಸ್ಥ್ರಿ ಸ್ಥಳವು ಕಾಡು ಪ್ರದೇಶ ಎಂದು ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಸ್ಥಳದಲ್ಲಿ ಪೊದೆಗಳು ಹಾಗೂ ಮರಗಳು ಇತ್ತು. ಸ್ಥ್ರಿ ಸ್ಥಳದಲ್ಲಿ ಚಾಸಾ-1 ರವರು ಭಾವಚಿತ್ರ ಹಾಗೂ ವಿಡಿಯೊ ಚಿತ್ರಗಳನ್ನು ಮಾಡಿರುತ್ತಾರಾ ಎಂದು ನಾನು ನೋಡಿರುವುದಿಲ್ಲ. ಸ್ಥ್ರಿ ಭಾವಚಿತ್ರದಲ್ಲಿ ಯಾವುದೆ ಜಾನುವಾರಗಳಿಗೆ ಗಾಯಆದ ಬಗ್ಗೆ ಕಂಡುಬಂದಿರುವುದಿಲ್ಲ ಎಂದರೆ ಸರಿ. ಚಾಸಾ-1 ರವರಿಗೆ ಸಹಾಯ ಮಾಡಲು ಯಾವುದೇ ಘಟನೆ ನಡೆಯದೆ ಇದ್ದರೂ ಸಹ ಘಟನೆ ನಡೆದಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಿಂದ 15 ದಾಖಲೆಗಳು ಈ ಪ್ರಕರಣಕ್ಕೆ ಪೂರಕವಾಗಿ ಸೃಷ್ಟಿಸಿದ ದಾಖಲೆಗಳು ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮು ಮಾ-1 ರಿಂದ 4 ಕ್ಕೂ ಆರೋಪಿಗಳಿಗೂ ಯಾವುದೇಸಂಬಂಧ ಇಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಕೋಸ್ಕರ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ